# ಎಲಿವೇಟ್: ಸಹ್ಯಾದ್ರಿಯ ಎಲ್‌ಎಲ್‌ಪಿಗಳಿಗೆ ಪ್ರಶಸ್ತಿ



**ಕರ್ನಾಟಕ ಸರಕಾರದಿಂದ ಸಹ್ಯಾದ್ರಿಯ ಎಲ್ ಎಲ್ ಪಿಗಳು ಎಲಿವೇಟ್ 2019ನ ವಿಜೇತರಾಗಿ ಆಯ್ಕೆಯಾದರು.**

**ಮಹಾನಗರ,** ಆ. 5: ಭಾರತ ಸರಕಾರದ ಐಟಿ, ಬಿಟಿ ಮತ್ತು ಎಸ್ ಆ್ಯಂಡ್ ಟಿ ಮೊದಲ ಸಮಗ್ರ ಉದ್ಯಮಶೀಲತೆ ವೇದಿಕೆಯಾದ 'ಎಲಿವೇಟ್ 2019'ರ ಫೈನಲ್ಸ್ ಬೆಂಗಳೂರಿನಲ್ಲಿ ನಡೆಯಿತು. ಇದರಲ್ಲಿ ಕರ್ನಾಟಕ ಸರಕಾರದಿಂದ ಸಹ್ಯಾದ್ರಿಯ ಎಲ್‌ಎಲ್ ಪಿಗಳು ಎಲಿವೇಟ್ 2019ನ ವಿಜೇತರಾಗಿ ಆಯ್ಕೆಯಾದರು.

ಮೈಸೂರು, ಮಂಗಳೂರು, ಕಲ್ಬುರ್ಗಿ, ಬೆಳಗಾವಿ ಮತ್ತು ಬೆಂಗಳೂರಿನಲ್ಲಿ ಮಲ್ಟಿಸಿಟಿ ಪ್ರವೇಶದ ನಂತರ ಫೈನಲ್‌ಗೆ ಪ್ರವೇಶಿಸಿದ ಒಟ್ಟು 270 ಸ್ಟಾರ್ಟ್ ಅಪ್‌ಗಳು, ಫೈನಲ್‌ನಲ್ಲಿ ಎಂಟು ನಿಮಿಷಗಳ ಸುತ್ತಿನ ಸಂದರ್ಶನ ಹೊಂದಿದ್ದು ಹಣಕಾಸು, ಮಾರ್ಗದರ್ಶನ, ವ್ಯವಹಾರ ಮತ್ತು ಕಲ್ಪನೆಗಳ ಕುರಿತು ಪ್ರಸ್ತುತಪಡಿಸಲು ಅವಕಾಶ ಮಾಡಲಾಗಿತ್ತು. ಐಟಿ / ಐಟಿಇಎಸ್, ಮೆಡ್ಟೆಕ್, ಅಗ್ರಿ / ಬಯೋಟೆಕ್, ಕ್ಲೀನ್‌ಟೆಕ್, ಎವಿಜಿಸಿ, ಇಎಸ್‌ಡಿಎಂ, ಕನ್ನಡ, ಸಂಸ್ಕೃತಿ ಮತ್ತು ಪ್ರವಾಸೋದ್ಯಮ, ಎವಿಜಿಸಿ ಏರೋಸ್ಪೇಸ್ ಮತ್ತು ಏವಿಯೇಷನ್ ಉದ್ಯಮದ ಸ್ಟಾರ್ಟ್-ಅಪ್ ಫೈನಲಿಸ್ಟ್‌ಗಳು ತಮ್ಮ ಉದ್ಯಮ ವ್ಯವಹಾರ ಮತ್ತು ಕಲ್ಪನೆಗಳನ್ನು ತೀರ್ಪುಗಾರರ ಸಮ್ಮುಖದಲ್ಲಿ ಪ್ರಸ್ತುತಪಡಿಸಿದರು. ಗ್ರ್ಯಾಂಡ್ ಜ್ಯೂರಿಯ ಶಿಫಾರಸುಗಳ ಆಧಾರದ ಮೇಲೆ 270 ಸ್ಟಾರ್ಟ್ ಅಪ್‌ಗಳಲ್ಲಿ 100 ವಿಜೇತರನ್ನು ಆಯ್ಕೆ ಮಾಡಲಾಯಿತು. ಸಮರ್ಪಕ್ ಸಹ್ಯಾದ್ರಿ ಟೆಕ್ ಎಲ್ ಎಲ್ ಪಿ- (ಪ್ರಾಜೆಕ್ಟ್ ಹೆಸರು 'ಎಜಿವಿ/ಎಎಂಆರ್ ಲಿಡಾರ್ ನ್ಯಾವಿಗೇಷನ್ ಕಿಟ್') ಹಾಗೂ ಉತ್ಕರ್ಷ್ ಸಹ್ಯಾದ್ರಿ ಟೆಕ್ ಎಲ್‌ಎಲ್‌ಪಿ - (ಯೋಜನೆ ಹೆಸರು 'ಬಿಸಿನೆಸ್ ಹ್ಯೂಮನ್ ಆಕ್ಟಿವಿಟಿ ಮೆಷರ್‌ಮೆಂಟ್ ಸಿಸ್ಟಮ್ ಇಂಟಿಗ್ರೇಟೆಡ್ ವಿಥ್ ಸೆನ್ಸರ್ ಟೆಕ್ನಾಲಜಿ') ವಿಜೇತರಾಗಿ ಆಯ್ಕೆಯಾದರು.

ಕರ್ನಾಟಕ ಸರ್ಕಾರದ ಕೆ-ಟೆಕ್ ಎನ್ ಎಎಸ್ ಸೆಂಟರ್, ಐಟಿ ಮತ್ತು ಬಿಟಿ ವಿಭಾಗದಲ್ಲಿ ವಿಜೇತ ಯೋಜನೆಗಳ ಜತೆಗೆ, ಸಹ್ಯಾದ್ರಿಯ ಇತರ 3 ಯೋಜನೆಗಳು ರನ್ನರ್-ಅಪ್ ಆಗಿ ಹೊರಹೊಮ್ಮಿದವು. ಸಮನ್ವಯ ಸಹ್ಯಾದ್ರಿ ಟೆಕ್ ಎಲ್‌ಎಲ್‌ಪಿ ಅವರ ಪ್ರಾಜೆಕ್ಟ್ 'ಮಣ್ಣಿನ ರಹಿತ ಕೃಷಿ-ಜಲಸಂಪನ್ಮೂಲ', ಅಭಿಮಾನ್ ಸಹ್ಯಾದ್ರಿ ಟೆಕ್ ಎಲ್‌ಎಲ್ಪಿ ಅವರ ಯೋಜನೆ 'ಸ್ವಯಂಚಾಲಿತ ಮೀಟರ್ ರೀಡಿಂಗ್ (ಎಎಂಆರ್)', ಸಹ್ಯಾದ್ರಿ ಎಡು ಡ್ರೀಮರ್ಸ್ ಆರ್‌ಎನ್‌ಡಿ ಪ್ರೈ ಲಿಮಿಟೆಡ್ ಅವರ ಪ್ರಾಜೆಕ್ಟ್ 'ಸ್ಟಾರ್ಟ್ ಗೇಟ್ ಏಯಿಡ್' ರನ್ನರ್ಸ್ ಅಪ್ ಯೋಜನೆಗಳು.

ಕರ್ನಾಟಕದ ಸರಕಾರದ ಮುಖ್ಯ ಕಾರ್ಯದರ್ಶಿ ಟಿ.ಎಂ. ವಿಜಯ್ ಭಾಸ್ಕರ್, ಕರ್ನಾಟಕ ಸರಕಾರದ ಬಿಟಿ ಮತ್ತು ಎಸ್ ಆ್ಯಂಡ್ ಟಿ, ಐಟಿ ವಿಭಾಗದ ಪ್ರಧಾನ ಕಾರ್ಯದರ್ಶಿ ಗೌರವ್ ಗುಪ್ತಾ, ಕರ್ನಾಟಕ ಸರಕಾರದ ಕಿಟ್ಸ್ ಎಂಡಿ ಪ್ರಶಾಂತ್ ಕುಮಾರ್ ಮಿಶ್ರಾ ಸಮಾರೋಪದಲ್ಲಿ ಮೊದಲಾದವರು ಉಪಸ್ಥಿತರಿದ್ದರು.